ದಿ.04.03.2023 CC.No.890/2016 PW-1

ದಿ.04.03.2023 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ. ಹೆಚ್ ಎಸ್ ಹೆಚ್ ವಕೀಲರಿಂದಃ

ನಾನು ಅವಿಧ್ಯಾವಂತ. ಆರೋಪಿ ನನಗೆ ಸುಮಾರು 15-20 ವರ್ಷಗಳಿಂದ ಪರಿಚಯ. ಆರೋಪಿಯ ನಿಖರವಾಗಿ ವಿಳಾಸ ಹೇಳಲು ಆಗುತ್ತದೆಯೇ ಎಂದರೆ ಸಾಕ್ಷಿ ಅರೋಪಿ ಮಂಗಳವಾರ ಪೇಟೆ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿರುವ ಪಿರ್ಯಾದು ನಮ್ಮ ವಕೀಲರು ಓದಿ ತಿಳಿಸಿರುತ್ತಾರೆ. ನಾನು ಕಳುಹಿಸಿದ ಕಾನೂನು ತಿಳುವಳಿಕಾ ನೋಟೀಸ್ ನಿಪಿ-3 ಅರೋಪಿಗೆ ತಲುಪಿದೆ. ಅರೋಪಿ ನನಗೆ 15-20 ವರ್ಷಗಳಿಂದ ಪರಿಚಯ ಎಂಬ ವಿಚಾರವನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಾಗಲೀ, ನೋಟೀಸ್‌ನಲ್ಲಾಗಲೀ ಮತ್ತು ಪಿರ್ಯಾದಿ ನಲ್ಲಿಯಾಗಲೀ ನಮೂದು ಮಾಡಿಲ್ಲ. ಆರೋಪಿಗೆ ನ್ಯಾಯಾಲಯದ ಮೂಲಕ ಹೋದಂತಹ ಸಮನ್ಸ್ ಜಾರಿಯಾಗಿದೆ ವಾಪಸ್ಸಾಗಿರುವ ವಿಚಾರ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೇ. ನಾನು ವ್ಯವಸಾಯ ಮಾಡುತ್ತೇನೆ ಮತ್ತು ವೈನ್ ಸ್ಟೋರ್ ನಡೆಸುತ್ತೇನೆ. ನಾನು ವೈನ್ಸ್ ಸೊಟೀರ್ ನಡೆಸುತ್ತಿರುವ ವಿಚಾರವನ್ನು ನನ್ನ ನೋಟೀಸ್ ನಲ್ಲಾಗಲೀ ಪಿರ್ಯಾದಿನಲ್ಲಾಗಲೀ ನಮೂದು ಮಾಡಿಲ್ಲ. ಆರೋಪಿ ನಿಮ್ಮ ಬಳಿ ಯಾವ ದಿನಾಂಕದಂದು ಐದು ಲಕ್ಷ ರೂ ಸಾಲ ಕೇಳಿದರು ಎಂದರೆ ಸಾಕ್ಷಿ 2016 ಜನವರಿ1 ನೇ ತಾರೀಖಿನಲ್ಲಿ ಆರೋಪಿ ಬಂದು ಮನೆ ರಿಪೇರಿ ಮಾಡಿಸಲು ಹಣ ಕೇಳಿದರು ನಾನು ಮೊದಲನೇ ವಾರದಲ್ಲಿಯೇ ಹಣ ನೀಡಿದ್ದೇನೆ. ಸದರಿ ದಿನಾಂಕದಂದು ನನ್ನ ಬಳಿ ಹಣ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಬಳಿ ಹಣ ಕೇಳಲು ಅರೋಪಿ ಒಬ್ಬರೇ ನಮ್ಮ ಮನೆಗೆ ಬಂದಿದ್ದರು ನಾನು ಹಣವನ್ನು

ನಮ್ಮ ಮನೆಯಲ್ಲಿಯೇ ನೀಡಿದ್ದೇನೆ. ನಾನು ಆರೋಪಿಗೆ 500 ರೂ ಮುಖ ಬೆಲೆಯ ಹತ್ತು ಕಟ್ಟುಗಳ ಹಣ ನೀಡಿದ್ದೇನೆ. ಹಣ ನೀಡಿದ ದಿನಾಂಕದಿಂದು ಆರೋಪಿಯಿಂದ ಬರವಣಿಗೆಯ ರೂಪದಲ್ಲಿ ಯಾವುದಾದರೂ ದಾಖಲಾತಿಯನ್ನು ಬರೆಸಿಕೊಂಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ಹಣ ನೀಡುವ ಸಂದರ್ಭದಲ್ಲಿ ನನ್ನ ಹೆಂಡತಿ ಮಗ ಮನೆಯಲ್ಲಿಯೇ ಇದ್ದರು ಅವರ ಸಮಕ್ಷಮ ನಾನು ಹಣ ನೀಡಲಿಲ್ಲ. ನಾನು ವ್ಯವಸಾಯ ಮಾಡುತ್ತಿರುವ ಬಗ್ಗೆ ಮತ್ತು ಅದರಿಂದ ಬರುವ ಆದಾಯದ ಸಂಬಂಧವಾಗಿ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ವೈನ್ಸ್ ಸ್ಟೋರ್ ಗೆ ಸಂಬಂಧಿಸಿದ ದಾಖಲಾತಿಗಳನ್ನು ಸಹ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಆದಾಯ ತೆರಿಗೆ ಪಾವತಿದಾರ. 2015-2018 ವರಗೂ ಆದಾಯ ತೆರಿಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಕಲ್ಪತರು ಗ್ರಾಮೀಣಾ ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದೇನೆ. ನನ್ನ ಖಾತೆಗೆ ಸಂಬಂಧಿಸಿದ ಅಕೌಂಟ್ ಸ್ಟೇಟ್ ಮೆಂಟ್ ಅನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅರೋಪಿಯ ಮನೆಯ ರಿಪೇರಿಗೆಂದು ಹಣ ಸಾಲವಾಗಿ ಪಡೆದರು ಎಂದು ಹೇಳಿದ್ದೀರಾ, ಆರೋಪಿಯ ಮನೆಯ ವಿಳಾಸ ಮತ್ತು ಖಾತಾ ನಂಬರ್ ವಿವರ ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ ಆದರೆ ಮನೆಯ ವಿಳಾಸ ಮಂಗಳವಾರ ಪೇಟೆ ಎಂದು ನುಡಿಯುತ್ತಾರೆ. ಆರೋಪಿಗೆ ಯಾವುದೇ ಹಣ ಕಾಸಿನ ತೊಂದರೆ ಇರಲಿಲ್ಲ, ಅರೋಪಿ ಆರ್ಥಿಕ ಸಧೃಡರಾಗಿದ್ದರು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಆದರೆ ಆರೋಪಿ ನನ್ನ ಬಳಿ ಬಂದು ಸಾಲ ಕೇಳಿದ್ದರು ಎಂದು ನುಡಿಯುತ್ತಾರೆ. ಆರೋಪಿಯನ್ನು ನಾನು ಸುಮಾರು 4-5 ಬಾರಿ ಬೇಟಿ ಮಾಡಿ ಸಾಲ ಮರುಪಾವತಿ ಮಾಡಲು ಕೇಳಿದ್ದೆ. ಸದರಿ ವಿಚಾರವನ್ನು ನಾನು ನಿಪಿ-3 ರಲ್ಲಿ ನಮೂದು ಮಾಡಿಲ್ಲ. ನಿಪಿ-3 ರ ಪ್ರಕಾರ ಆರೋಪಿ ದಿ.02.08.2016 ರಂದು ನಿಪಿ-1 ನ್ನು ನೀಡಿದರು. ನಿಪಿ-1 ನ್ನು ಅರೋಪಿ ಅವರ ವಾಸವಾಗಿರುವ ಬಾಡಿಗೆ ಮನೆಯಲ್ಲಿ ನೀಡಿದರು. ಆರೋಪಿ ನಿಪಿ-1 ನ್ನು ನೀಡುವ ಸಮಯದಲ್ಲಿ ನಮ್ಮಿಬ್ಬರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ನಿಪಿ-1 ನ್ನುಆರೋಪಿಯೇ ಭರ್ತಿ ಮಾಡಿನೀಡಿದ್ದರು. ನಿಪಿ-1 ರಲ್ಲಿರುವ ಒಕ್ಕಣೆ ಮತ್ತು ಸಹಿ ಬೇರೆ ಬೇರೆ ಶಾಹಿಯಲ್ಲಿ ಇದೆ ಎಂದರೆ ಸಾಕ್ಷಿ ಆರೋಪಿಯೇ

ಬರೆದು ಸಹಿ ಮಾಡಿ ನೀಡಿದ್ದು ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.